ಹಿಂದುಳಿದ ವರ್ಗಗಳ ವಸತಿಶಾಲೆ ಪ್ರಾರಂಭಿಸುವುದು

97(145): ಶ್ರೀ ಎನ್. ಚಲುವರಾಯ ಸ್ವಾಮಿ (ನಾಗಮಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗಳ ವಸತಿ ಶಾಲೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸಲಾಗಿದೆ?

2. ಈ ಮೂರು ವರ್ಷಗಳಲ್ಲಿ ಮೊರಾರ್ಜಿ ವಸತಿ ಶಾಲೆಯನ್ನು ಯಾವ ಯಾವ ಪ್ರದೇಶದಲ್ಲಿ ಪ್ರಾರಂಭಿಸುವ ಬಗ್ಗೆ ಸಮೀಕ್ಷೆ ನಡೆಸಲಾಗಿದೆ ಮತ್ತು ಎಷ್ಟು ಪಾರಂಭಿಸಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

1. ಹಿಂದುಳಿದ ವರ್ಗ - ಇಲ್ಲ -

2. ಪರಿಶಿಷ್ಟ ವರ್ಗ - ವಸತಿ ಶಾಲೆಗಳು (ಆಶ್ರಯ ಶಾಲೆಗಳು) - 16

ವಸತಿ ಶಾಲೆಗಳು) - 3

3. ಪರಿಶಿಷ್ಟ ಜಾತಿ - ವಸತಿ ಶಾಲೆಗಳು (1 ರಿಂದ 4ನೇ ತರಗತಿಯವರೆಗೆ -2

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು - 6

2. ಇಲ್ಲ.

ಆದರೆ, ಕಳೆದ ಮೂರು ವರ್ಷಗಳಲ್ಲಿ ಪ್ರಾರಂಭವಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಈ ಕೆಳಕಂಡಂತಿವೆ:

ಪರಿಶಿಷ್ಟ ಜಾತಿಗಳವರಿಗೆ - 6

ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕೆರೆಯ ನೀರು ಕಲುಷಿತ ಗೊಂಡಿರುವುದು

98(148): ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಚಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕು ಬೇಲೂರು ಹೋಬಳಿಯ ವೆಂಕಟಾಪುರ ರೆವಿನ್ಯೂ ಗ್ರಾಮ ಪಂಚಾಯಿತಿಗೆ ಸೇರಿದ ಚಿನ್ನರಾಜು ಕುಂಟೆಯ ನೀರನ್ನು ದನಕರುಗಳು ಮತ್ತು ವೆಂಕಟಾಪುರದ ಜನ ಉಪಯೋಗಿಸತಕ್ಕಂತಹ ಕೆರೆಯಲ್ಲಿ ಮೀನು ಬಿಡಲು ಸರ್ಕಾರವು ಹರಾಜು ಮಾಡಿ ಗುತ್ತಿಗೆಗೆ ಕೊಟ್ಟಿರುವುದು ನಿಜವೇ;

ಆ. ಆ ಗುತ್ತಿಗೆದಾರನು ಕೋಳಿ ಸಾಕಾಣಿಕೆ ಮಾಡುತ್ತಿದ್ದು ಆತನ ಕೋಳಿ ಫಾರಂನಲ್ಲಿ ಸತ್ತು ಹೋದ ಕೋಳಿಗಳನ್ನು ಚಿನ್ನರಾಜು ಕುಂಟೆ ಮೀನುಗಳಿಗೆ ಹಾಕಿ ನೀರೆಲ್ಲಾ ಕಲುಷಿತಗೊಂಡು ಹಾಳಾಗಿ ವೆಂಕಟಾಪುರ ಗ್ರಾಮದ ಜನಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ. ಇಲಾಖೆಯು ಸಾರ್ವಜನಿಕರ ಹಿತದೃಷ್ಟಿಯನ್ನು ಕಡೆಗಣಿಸಿ ಗುತ್ತಿಗೆದಾರನಿಗೆ ಸಹಾಯ ಮಾಡಲು ಸಂಬಂಧಪಟ್ಟ ನೊಂದ ಗ್ರಾಮಸ್ಥರ ಅಹವಾಲನ್ನು ಲೆಕ್ಕಿಸದೆ ಕಾನೂನನ್ನು ಉಲ್ಲಂಘನೆ ಮಾಡಿರುವುದು ಸರಿಯೆ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು)

ಅ. ಈ ಕೆರೆಯು ಕೋಲಾರ ಜಿಲ್ಲಾ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುತ್ತದೆ. ಮತ್ತು ಈ ಕೆರೆಯ ಮೀನು ಪಾಶುವಾರು ಹಕ್ಕನ್ನು ಮೂರು ವರ್ಷಗಳ ಅವಧಿಗೆ ಟೆಂಡರ್ ಮತ್ತು ಹರಾಜು ಮೂಲಕ ವಿಲೇವಾರಿ ಮಾಡಿದೆ.

ಆ. ಹೌದು. ಈ ವಿಷಯವು ಕೋಲಾರ ಜಿಲ್ಲಾ ಪಂಚಾಯಿತಿ ಗಮನಕ್ಕೆ ಬಂದಿರುತ್ತದೆ.

ಇ. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಕರೆಯ ಮೀನುಗಳಿಗೆ ಸತ್ತ ಕೋಳಿಗಳನ್ನು ಆಹಾರವಾಗಿ ನೀಡಬಾರದೆಂದು ಗುತ್ತಿಗೆದಾರರಿಗೆ ಕಟ್ಟುನಿಟ್ಟಾಗಿ ಎಚ್ಚರಿಸಲಾಗಿದೆ. ಸತ್ತ ಕೋಳಿಗಳನ್ನು ಉಪಯೋಗಿಸುವುದನ್ನು ತಡೆಗಟ್ಟುವ ಕ್ರಮವನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಸದರಿ ಕೆರೆಯನ್ನು ಶುಚಿಗೊಳಿಸಿರುವುದಾಗಿ ವರದಿ ಬಂದಿದೆ. ಜಿಲ್ಲಾ ಪಂಚಾಯಿತಿಯು ಗುತ್ತಿಗೆ ಅವಧಿಯನ್ನು ಮೂರು ವರ್ಷಗಳಿಂದ ಒಂದು ವರ್ಷಕ್ಕೆ ಕಡಿತಗೊಳಿಸಿರುತ್ತದೆ.

ಕಮ್ಮಾ ಜನಾಂಗದವನ್ನು 2-ಎ ವರ್ಗಕ್ಕೆ ಸೇರಿಸುವುದು

101(147): ಶ್ರೀ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ. ರಾಜ್ಯದಲ್ಲಿರುವ ಕಮ್ಮಾ ಜನಾಂಗದವರ ಸಂಖ್ಯೆ ಎಷ್ಟು?

ಆ. ಈ ಜನಾಂಗವನ್ನು 3(ಎ)ವರ್ಗದಲ್ಲಿ ಸೇರಿಸಲಾಗಿದೆಯೇ?

ಇ. ಈ ಜನಾಂಗದವರು ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಈ ಜನಾಂಗದಲ್ಲಿ ಬಡವರು ಹೆಚ್ಚಾಗಿರುವುದರಿಂದ ಹಾಗೂ ಇದೊಂದು ಹಿಂದುಳಿದ ವರ್ಗವಾಗಿರುವುದರಿಂದ ಕಮ್ಮಾ ಜನಾಂಗವನ್ನು 3(ಎ) ಪ್ರವರ್ಗದಿಂದ ಬೇರ್ಪಡಿಸಿ 2-ಎ ವರ್ಗದಲ್ಲಿ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಎರಡನೇ ಹಿಂದುಳಿದ ವರ್ಗಗಳ (ಶ್ರೀ ವೆಂಕಟಸ್ವಾಮಿ) ಆಯೋಗವು 1984ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಕಮ್ಮಾ ಜನಾಂಗದ ಜನಸಂಖ್ಯೆ ರಾಜ್ಯದಲ್ಲಿ 89,065 ಇದೆ. ಜಾತಿಯ ಆಧಾರದ ಮೇಲೆ ಜನಗಣತಿ ನಡೆಯದಿರುವುದರಿಂದ ಈ ಜಾತಿಯ ಈಗಿನ ಜನಸಂಖ್ಯೆ ವಿವರಗಳು ಲಭ್ಯವಿರುವುದಿಲ್ಲ.

ಆ. ಹೌದು.